**ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ ಸಮಿತಿ**
**ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004**

---

**ಪ್ರಕಟಣೆಗಾಗಿ**

# ಸುತ್ತೂರು ಜಾತ್ರೆ – ಧಾರ್ಮಿಕ ಸಾಂಸ್ಕೃತಿಕ ಯಾತ್ರೆ
## 13 ರಿಂದ 18 ಜನವರಿ 2018

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು 2018 ಜನವರಿ 13 ರಿಂದ 18 ರವರೆಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿದೆ.

ಜಾತ್ರಾ ಮಹೋತ್ಸವದಲ್ಲಿ ರಥೋತ್ಸವ, ತೆಪ್ಪೋತ್ಸವ, ಕೊಂಡೋತ್ಸವ, ಶ್ರೀ ಮಹದೇಶ್ವರ ಮುತ್ತಿನಪಲ್ಲಕ್ಕಿ ಉತ್ಸವ, ಲಕ್ಷದೀಪೋತ್ಸವ ಮುಂತಾದ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ.

ಭಜನಾ ಮೇಳ: 26ನೆಯ ಭಜನಾಮೇಳ ಸ್ಪರ್ಧೆಯಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಂದ ಅಲ್ಲದೆ ನೆರೆ ರಾಜ್ಯಗಳಿಂದಲೂ ಸುಮಾರು 800ಕ್ಕೂ ಹೆಚ್ಚು ತಂಡಗಳು ಭಾಗವಹಿಸುವ ನಿರೀಕ್ಷೆ ಇದೆ. ಪುರುಷ, ಮಹಿಳಾ, ಮಕ್ಕಳ ಭಜನಾ ತಂಡಗಳು ಮತ್ತು ಏಕನಾದ ತಂಡಗಳು ಹೀಗೆ ಆರು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಪ್ರತಿ ವಿಭಾಗಕ್ಕೂ ಐದು ಬಹುಮಾನಗಳನ್ನು ನೀಡಲಾಗುತ್ತಿದೆ.

ವಸ್ತುಪ್ರದರ್ಶನ: ಕೈಗಾರಿಕೆ, ವಿಜ್ಞಾನ, ಶಿಕ್ಷಣ, ಆರೋಗ್ಯ, ತಾಂತ್ರಿಕ, ಚಿತ್ರಕಲೆ ಹಾಗೂ ಸಾಂಸ್ಕೃತಿಕ ವಿಭಾಗಗಳನ್ನೊಳಗೊಂಡ ವಸ್ತುಪ್ರದರ್ಶನವನ್ನು ಆಯೋಜಿಸಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಇಲಾಖೆಗಳು ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಸ್ಥೆಗಳು ಪಾಲ್ಗೊಳ್ಳುತ್ತವೆ. ಕರಕುಶಲ, ಕೈಮಗ್ಗ, ಗೃಹೋಪಯೋಗಿ ಪದಾರ್ಥಗಳ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆ ಇರುತ್ತದೆ. ಮಹಿಳಾ ಉದ್ಯಮಿಗಳು ಪ್ರದರ್ಶನದಲ್ಲಿ ಪಾಲ್ಗೊಳ್ಳಲಿದ್ದಾರೆ. ಜೆಎಸ್‌ಎಸ್ ಪ್ರೌಢಶಾಲಾ ವಿದ್ಯಾರ್ಥಿಗಳು ತಯಾರಿಸಿರುವ 200ಕ್ಕೂ ಹೆಚ್ಚು ಉತ್ತಮ ಶೈಕ್ಷಣಿಕ ಮಾದರಿಗಳ ಪ್ರದರ್ಶನವಿರುತ್ತದೆ.

ಕೃಷಿಮೇಳ: ರೈತರಿಗೆ ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ತಂತ್ರಜ್ಞಾನದ ಬಗ್ಗೆ ಮಾಹಿತಿ ನೀಡಲು ಈ ಮೇಳವನ್ನು ಏರ್ಪಡಿಸಲಾಗುತ್ತಿದೆ. ಇದರಲ್ಲಿ ಸಮಗ್ರ ಬೆಳೆ ನಿರ್ವಹಣೆ, ಕೃಷಿ ಪ್ರದರ್ಶನ, ಪಶುಸಂಗೋಪನೆ ಬಗ್ಗೆ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಿ ಸಮಗ್ರ ಮಾಹಿತಿ ನೀಡುವ ವ್ಯವಸ್ಥೆ ಇರುತ್ತದೆ. ಸಿರಿಧಾನ್ಯಗಳ ಪ್ರಾತ್ಯಕ್ಷಿಕೆಗಳು, ಮಾರಾಟ ವ್ಯವಸ್ಥೆ ಇರುತ್ತದೆ. ಇದೇ ಮೊದಲ ಬಾರಿಗೆ ಸಿರಿಧಾನ್ಯಗಳಿಂದ ಆಹಾರ ತಯಾರಿಸುವ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ರೈತ ಉತ್ಪಾದನಾ ಕಂಪನಿಗಳು – ಅವಕಾಶಗಳು ಮತ್ತು ಸವಾಲುಗಳು ಎಂಬ ವಿಷಯ ಕುರಿತು ಒಂದು ದಿನದ ಕೃಷಿ ವಿಚಾರಸಂಕಿರಣ ಏರ್ಪಡಿಸಲಾಗಿದೆ.

ಚಿತ್ರಸಂತೆ: ಸ್ಥಳದಲ್ಲಿಯೇ ಚಿತ್ರ ರಚಿಸುವುದು, ಕಲಾಕೃತಿಗಳ ಪ್ರದರ್ಶನ ಹಾಗೂ ಮಾರಾಟ ಮಾಡತಕ್ಕ ಕಲಾವಿದರುಗಳಿಗೆ ಅವಕಾಶ ಕಲ್ಪಿಸಲಾಗಿದೆ.

ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ: ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗಾಗಿ ಸ್ಥಳದಲ್ಲೇ ಚಿತ್ರ ಬರೆಯುವ ರಾಜ್ಯಮಟ್ಟದ ಸ್ಪರ್ಧೆಯನ್ನು ಜನವರಿ 14 ರಂದು ಏರ್ಪಡಿಸಲಾಗಿದೆ.

ಸಾಮೂಹಿಕ ವಿವಾಹ: ಸುತ್ತೂರು ಶ್ರೀಕ್ಷೇತ್ರದಲ್ಲಿ 16 ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಉಚಿತ ಸರಳ ಸಾಮೂಹಿಕ ವಿವಾಹವನ್ನು ಜನವರಿ 14 ರಂದು ಏರ್ಪಡಿಸಲಾಗಿದೆ. ಎಲ್ಲಾ ಧರ್ಮದವರಿಗೂ ಇದರ ಉಪಯೋಗ ಪಡೆಯಲು ಮುಕ್ತ ಅವಕಾಶವಿರುತ್ತದೆ. ವಧುವಿಗೆ ಮಾಂಗಲ್ಯ, ಸೀರೆ, ಕಾಲುಂಗುರಗಳನ್ನು ಹಾಗೂ ವರನಿಗೆ ಪಂಚೆ, ವಲ್ಲಿ ಹಾಗೂ ಷರ್ಟ್‌ಗಳನ್ನು ನೀಡಲಾಗುತ್ತದೆ. ಸರಳ ವಿವಾಹದಲ್ಲಿ ಈವರೆಗೆ 2,600ಕ್ಕೂ ಹೆಚ್ಚು ಮಂದಿ ವಿವಾಹಿತರಾಗಿದ್ದಾರೆ. ಈಗಾಗಲೇ ವಿವಾಹ ನೋಂದಣಿ ಕಾರ್ಯ ಆರಂಭವಾಗಿದ್ದು, ಕಳೆದ ವರ್ಷಕ್ಕಿಂತಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಸೋಬಾನೆ ಹಾಗೂ ಗಾಳಿಪಟ ಸ್ಪರ್ಧೆಗಳು: ಗ್ರಾಮೀಣ ಕಲೆಗಳಾದ ಸೋಬಾನೆಪದ ಹಾಗೂ ರಂಗೋಲಿ ಸ್ಪರ್ಧೆಗಳನ್ನು ಜನವರಿ 13 ರಂದು ಹಾಗೂ ಮಕ್ಕಳಿಗಾಗಿ ಗಾಳಿಪಟ ಸ್ಪರ್ಧೆಯನ್ನು ಜನವರಿ 16 ರಂದು ಏರ್ಪಡಿಸಲಾಗಿದೆ.

ಕುಸ್ತಿ ಪಂದ್ಯಾವಳಿ: ಜನವರಿ 17 ರಂದು ಕುಸ್ತಿ ಪಂದ್ಯಾವಳಿ ನಡೆಯಲಿದೆ. ಈ ಬಾರಿ ಎರಡು ಮಾರ್ಫಿಟ್ ಕುಸ್ತಿ ನಡೆಯುತ್ತವೆ. ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆಗೆ ಸುತ್ತೂರು ಕೇಸರಿ ಪ್ರಶಸ್ತಿ ಹಾಗೂ ಸ್ಥಳೀಯ ಉತ್ತಮ ಕುಸ್ತಿ ಸ್ಪರ್ಧೆಗೆ ಸುತ್ತೂರು ಕುಮಾರ ಪ್ರಶಸ್ತಿ ನೀಡಲಾಗುವುದು.

ದೇಸಿ ಆಟಗಳು: ಜೆಎಸ್‌ಎಸ್ ಸಂಸ್ಥೆಯ ಪ್ರೌಢಶಾಲೆಗಳ ಹಾಗೂ ಗ್ರಾಮೀಣ ಭಾಗದ ಜನತೆಗಾಗಿ ದೇಸಿ ಆಟಗಳ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಗೋಲಿ, ಬುಗುರಿ, ಹುಲಿ–ಕುರಿ, ನವಕಂಕರಿ, ಹಾವು–ಏಣಿ, ಚೌಕ ಬಾರ, ಚದುರಂಗ, ಕೆಸರು ಗದ್ದೆ ಓಟ, ಹಗ್ಗ–ಜಗ್ಗಾಟ, ಅಣ್ಣೆಕಲ್ಲು, ಕುಂಟೋ ಬಿಲ್ಲೆ, ಅಳಿಗುಳಿ ಮನೆ, 50 ಕೆ.ಜಿ. ತೂಕದ ಚೀಲ ಹೊತ್ತುಕೊಂಡು ಓಡುವುದು, ಕಲ್ಲುಗುಂಡು ಎತ್ತುವುದು, ನಿಂಬೆಹಣ್ಣು ಇರುವ ಚಮಚವನ್ನು ಬಾಯಲ್ಲಿಟ್ಟುಕೊಂಡು ಓಡುವುದು, ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಮಡಕೆ ಒಡೆಯುವುದು ಮತ್ತು ತುಂಬಿದ ಬಿಂದಿಗೆಯನ್ನು ತಲೆಯ ಮೇಲೆ ಹೊತ್ತು ಓಡುವುದು ಮುಂತಾದವುಗಳಿರುತ್ತವೆ.

ದನಗಳ ಜಾತ್ರೆ (ಸುವರ್ಣ ಸುರಭಿ): ದನಗಳ ಜಾತ್ರೆಯನ್ನು ಆರಂಭಿಸಿ 50 ವರ್ಷಗಳಾಗಿದೆ. ಅದರ ಸುವರ್ಣಸಂಭ್ರಮದ ಸಂದರ್ಭ ಈ ವರ್ಷ. ಉತ್ತಮ ರಾಸುಗಳಿಗೆ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

ಸಾಂಸ್ಕೃತಿಕ ಮೇಳ ಹಾಗೂ ಸ್ಪರ್ಧೆ: ಜೆಎಸ್‌ಎಸ್ ಅಂತರ – ಸಂಸ್ಥೆಗಳ ಸಾಂಸ್ಕೃತಿಕ ಮೇಳದಲ್ಲಿ ಭರತನಾಟ್ಯ, ಸಾಮೂಹಿಕ ನೃತ್ಯ, ವಚನಗಾಯನ, ಸಾಮೂಹಿಕ ಗಾಯನ ಮತ್ತು ಶಾಸ್ತ್ರೀಯ ಗಾಯನದ ಸ್ಪರ್ಧೆಗಳಲ್ಲಿ ಸುಮಾರು 3500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದು, 450ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನಡೆಸಿಕೊಡುವರು.

ಸಾಂಸ್ಕೃತಿಕ ಕಾರ್ಯಕ್ರಮಗಳು: ಗ್ರಾಮಾಂತರ ಹಾಗೂ ನಗರಪ್ರದೇಶದ ವೃತ್ತಿ ಪರ ಕಲಾವಿದರಿಂದ ಹಲವಾರು ನಾಟಕಗಳು ಹಾಗೂ ಗ್ರಾಮಾಂತರ ಹವ್ಯಾಸಿ ಕಲಾವಿದರಿಂದ 15 ನಾಟಕಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಕಲಾತಂಡಗಳಿಂದ ಪ್ರದರ್ಶನ: ಕರ್ನಾಟಕ, ಕೇರಳ, ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳ ಕಲಾತಂಡಗಳಿಂದ ವರ್ಣರಂಜಿತ ಕಲಾಪ್ರದರ್ಶನಗಳು ನಡೆಯುತ್ತವೆ.

## ಜಾತ್ರಾ ವಿಶೇಷ ಕಾರ್ಯಕ್ರಮಗಳು

ನೂತನ ರಥದ ಸಮರ್ಪಣೆ : ಈ ವರ್ಷದ ಜಾತ್ರಾ ಮಹೋತ್ಸವದಲ್ಲಿ ಭಕ್ತರ ಸದಾಶಯ ದಂತೆ ನೂತನ ಮಹಾರಥವನ್ನು ಆದಿಜಗದ್ಗುರು ಶಿವಯೋಗಿಗಳಿಗೆ ಸಮರ್ಪಿಸ ಲಾಗುತ್ತಿದೆ. ನಾಡಿನ ಹೆಸರಾಂತ ರಥ ಶಿಲ್ಪಿಗಳಾದ ಬೆಂಗಳೂರಿನ ರಥಶಿಲ್ಪಿ ಶ್ರೀ ಬಸವರಾಜ್ ಎಸ್. ಬಡಿಗೇರ ಮತ್ತು ಅವರ ಮಕ್ಕಳು ಹಾಗೂ ಅವರ ವಿದ್ಯಾರ್ಥಿಗಳು ಶಾಸ್ತ್ರೋಕ್ತವಾದ ರೀತಿಯಲ್ಲಿ ಕಲಾತ್ಮಕವಾಗಿ ಇದನ್ನು ಸಿದ್ಧಪಡಿಸಿರುತ್ತಾರೆ. ಈ ನೂತನ ರಥಕ್ಕೆ ಕಬ್ಬಿಣದ ಆಕ್ಸೆಲ್, ಗಾಲಿ ಅಲ್ಲದೆ ಆಧುನಿಕ ತಂತ್ರಜ್ಞಾನದ ಬ್ರೇಕ್ ಹಾಗೂ ಟರ್ನಿಂಗ್ ಸೌಲಭ್ಯವನ್ನು ತಮಿಳುನಾಡಿನ ತಿರುಚನಾಪಳ್ಳಿಯ ಶ್ರೀ ಶೇಖರ್‌ರವರು ಮತ್ತು ರಥದ ಕಬ್ಬಿಣದ ಗೋಪುರದ ಕೆಲಸವನ್ನು ಬಾದಾಮಿಯ ಶ್ರೀ ಪ್ರಭು ರವರು ಸಿದ್ದಪಡಿಸಿರುತ್ತಾರೆ. ಚಿನ್ನದ ಲೇಪನವಿರುವ ಕಳಶ, ಹಿತ್ತಾಳೆ ಡೂಮ್, ನಾಲ್ಕು ದಿಕ್ಕಿನಲ್ಲಿ ಅಳವಡಿಸುವ ಪಂಚಲೋಹ ಮೂರ್ತಿಗಳನ್ನು ಆಂಧ್ರಪ್ರದೇಶದ ಅದೋನಿಯ ಶ್ರೀ ಗುಂಡಾ ಚಾರಿಯವರು ಸಿದ್ಧಪಡಿಸಿರುತ್ತಾರೆ. ರಥದ ಗೋಪುರಕ್ಕೆ ಅವಶ್ಯವಿರುವ ಬಣ್ಣದ ಬಟ್ಟೆಗಳು ಬಾವುಟಗಳು, ತೋರಣಗಳನ್ನು ಚೆನ್ನೈನ ಶ್ರೀ ಗಜೇಂದ್ರ ಶಾ ಸಿದ್ಧಪಡಿಸಿರುತ್ತಾರೆ. ರಥವನ್ನು ಎಳೆಯಲು ಅವಶ್ಯವಿರುವ ವಿಶೇಷವಾದ ಹಗ್ಗವನ್ನು ಚೆನ್ನೈನ ಶ್ರೀ ಆರ್ಯರವರಿಂದ ಪಡೆಯಲಾಗಿದೆ.

ನೂತನ ಮಹಾರಥೋತ್ಸವಕ್ಕೆ ಜನವರಿ 15 ರಂದು ಕರ್ನಾಟಕದ ರಾಜ್ಯಪಾಲರಾದ ಘನತೆವೆತ್ತ ಶ್ರೀ ವಾಜೂಭಾಯಿ ರೂಡಾಭಾಯಿ ವಾಲರವರು ಚಾಲನೆ ನೀಡಲಿದ್ದಾರೆ.

ಮಾಹಿತಿ ಕೇಂದ್ರದ ಉದ್ಘಾಟನೆ: ಸುತ್ತೂರು ಶ್ರೀಕ್ಷೇತ್ರಕ್ಕೆ ಆಗಮಿಸುವ ಭಕ್ತಾದಿಗಳು ಹಾಗೂ ಪ್ರವಾಸಕ್ಕೆ ಆಗಮಿಸುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಶ್ರೀಕ್ಷೇತ್ರದಲ್ಲಿ ಮಾಹಿತಿ ಕೇಂದ್ರವನ್ನು ನಿರ್ಮಿಸಿದ್ದು, ಜನವರಿ 13ರಂದು ಉದ್ಘಾಟನೆಯಾಗಲಿದೆ.

ಬೀಜ ಸಂಸ್ಕರಣಾ ಘಟಕ: ಬೀಜ ಸಂಸ್ಕರಣಾ ಘಟಕದಲ್ಲಿ ಹಳೆಯ ಪೋಲಾರ್ ವೆಸ್ಟ್ರಬ್ ಕಂಪನಿಯ ಹೆಚ್ಚಿನ ಸಾಮರ್ಥ್ಯವಿರುವ ಯಂತ್ರವನ್ನು ಖರೀದಿಸಿ ಅಳವಡಿಸಲಾಗಿದೆ. ಈ ಯಂತ್ರದ ಬಳಕೆಯಿಂದ ಒಂದು ಗಂಟೆಗೆ 2 ಟನ್‌ಗಳಷ್ಟು ಸಂಸ್ಕರಣೆ ಮಾಡಲು ಸಾಧ್ಯವಿದೆ. ಇದರಿಂದ ಸಂಸ್ಕರಣೆಗೆ ತಗಲುವ ಸಮಯವು ರೈತರಿಗೆ ಉಳಿತಾಯವಾಗಲಿದ್ದು, ಉತ್ತಮ ಗುಣಮಟ್ಟದ ಬಿತ್ತನೆ ಸಂಸ್ಕರಣೆಗೆ ಅವಕಾಶವಾಗಲಿದೆ. ಇದಲ್ಲದೇ, ಬೀಜವನ್ನು ಸೂಕ್ತ ತೇವಕ್ಕೆ ಸರಿಯಾಗಿ ಒಣಗಿಸಲು ಘಟಕದ ಎದುರಿಗೆ ಬೀಜ ಒಣಗಿಸುವ ಖಣವನ್ನು ವ್ಯವಸ್ಥೆಮಾಡಲಾಗಿದೆ.

ಬೀಜ ಉಗ್ರಾಣ ಹಾಗೂ ಬೀಜ ಬ್ಯಾಂಕ್: ಹೆಚ್ಚಿನ ಬಿತ್ತನೆ ಬೀಜವನ್ನು ದೀರ್ಘಕಾಲದವರೆಗೆ ಸುರಕ್ಷಿತವಾಗಿ ಶೇಖರಿಸಿಡಲು ಸೀಡ್ ಹಬ್ ಯೋಜನೆಯ ಅನುದಾನದಿಂದ ಹೊಸ ಉಗ್ರಾಣವನ್ನು ನಿರ್ಮಿಸಲಾಗಿದೆ. ಈ ಉಗ್ರಾಣದಲ್ಲಿ ಒಂದೇ ಬಾರಿಗೆ 1000 ಕ್ವಿಂಟಾಲಿನಷ್ಟು ಬಿತ್ತನೆ ಬೀಜವನ್ನು ಶೇಖರಣೆ ಮಾಡಬಹುದಾಗಿದೆ.

ಸಿರಿಧಾನ್ಯ ಆಹಾರ ತಯಾರಿಕೆ: ಕೃಷಿಮೇಳದಲ್ಲಿ ಜನವರಿ 16ರಂದು ಸಿರಿಧಾನ್ಯಗಳಿಂದ ಆಹಾರ ತಯಾರಿಸುವ ಸ್ಪರ್ಧೆಯನ್ನು ಏರ್ಪಡಿಸಿದೆ.

ಗೋಶಾಲೆ: ವಿನಾಶದ ಅಂಚಿನಲ್ಲಿರುವ ದೇಸಿ ತಳಿಯ ಗೋವುಗಳ ಸಂರಕ್ಷಣೆ, ಪಾಲನೆ, ಪೋಷಣೆ, ದೇಸಿ ತಳಿ ಅಭಿವೃದ್ಧಿ ಮತ್ತು ಜಾಗೃತಿ ಮೂಡಿಸುವುದಕ್ಕಾಗಿ ಶಿವರಾತ್ರೀಶ್ವರ ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ಸುತ್ತೂರಿನ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಪಶು ವೈದ್ಯಕೀಯ ಮತ್ತು ಪಶುಪಾಲನಾ ಇಲಾಖೆಯ ಸಹಯೋಗದೊಂದಿಗೆ ಜಾನುವಾರುಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಿ ಮೊದಲ ಹಂತದಲ್ಲಿ ಸುಮಾರು ಒಂದು ನೂರು ಜಾನುವಾರುಗಳನ್ನು ಸಾಕಣೆ ಮಾಡಲು ವ್ಯವಸ್ಥಿತ ಗೋಶಾಲೆ ನಿರ್ಮಿಸಲಾಗಿದೆ.

ಗೋಶಾಲೆಯಲ್ಲಿ ರಾಜ್ಯದ ಪ್ರಮುಖ ದೇಸಿ ತಳಿಗಳಾದ ಹಳ್ಳೀಕಾರ್, ಗಿರ್, ಮಲ್ನಾಡ್ ಗಿಡ್ಡ ಮತ್ತು ಮಿಶ್ರತಳಿಗಳನ್ನು ಸಾಕಣೆ ಮಾಡುವ ಉದ್ದೇಶದಿಂದ ಅಗತ್ಯ ಮೇವು, ನೀರು ಮತ್ತು ಔಷಧಿಯನ್ನು ಪೂರೈಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಶ್ರೀಕ್ಷೇತ್ರದಲ್ಲಿ ಹೆಚ್ಚಿನ ದೇಸಿ ಜಾನುವಾರುಗಳನ್ನು ಸಂರಕ್ಷಿಸಿ, ಅಭಿವೃದ್ಧಿಗೊಳಿಸಲಾಗುತ್ತದೆ.

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ಜ್ಞಾನ ಸಂಪನ್ಮೂಲ ಕೇಂದ್ರ: ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಾಯದೊಂದಿಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಜ್ಞಾನ ಸಂಪನ್ಮೂಲ ಕೇಂದ್ರ ಸ್ಥಾಪಿಸಲಾಗುತ್ತಿದೆ.

ಇದರ ಉದ್ದೇಶ ಗ್ರಾಮೀಣ ಪ್ರದೇಶದ ಶಾಲಾ ಮಕ್ಕಳು, ಶಿಕ್ಷಕರು, ಪ್ರವಾಸಕ್ಕೆ ಬರುವ ಶಾಲಾ ಮಕ್ಕಳು ಹಾಗೂ ಭಕ್ತಾದಿಗಳಲ್ಲಿ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಅರಿವು ಹಾಗೂ ಅವರಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದಾಗಿರುತ್ತದೆ.

ಕೇಂದ್ರವು ಮಲ್ಟಿಮೀಡಿಯಾ, ವಿಜ್ಞಾನ ಮತ್ತು ತಂತ್ರಜ್ಞಾನ ಗ್ಯಾಲರಿ, ಹೊರಾಂಗಣ ವಿಜ್ಞಾನ ಉದ್ಯಾನವನ (ಪಾರ್ಕ್), ವೈಜ್ಞಾನಿಕ ಪ್ರಯೋಗಾಲಯ, ವಿಜ್ಞಾನ ಮತ್ತು ಆವಿಷ್ಕಾರಗಳ ಕಾರ್ಯಾಲಯ, ತಾರಾಮಂಡಲ, ಗ್ರಾಮೀಣ ವಿಜ್ಞಾನ ಮತ್ತು ತಂತ್ರಜ್ಞಾನ ಉದ್ಯಾನವನ, ವೈಜ್ಞಾನಿಕ ಗ್ರಂಥಾಲಯ ಹಾಗೂ ಗಣಕಯಂತ್ರ ಕೇಂದ್ರಗಳನ್ನು ಹೊಂದಲಿದೆ. ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಪ್ರತಿ ತಿಂಗಳು ಕಾರ್ಯಾಗಾರ ನಡೆಯಲಿದೆ. ಇದರ ಶಿಲಾನ್ಯಾಸವನ್ನು 2.1.2016 ರಂದು ಭಾರತ ಸರ್ಕಾರದ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರು ನೆರವೇರಿಸಿರುತ್ತಾರೆ. ಮೊದಲ ಹಂತದಲ್ಲಿ ತಯಾರಿಕಾ ಕೇಂದ್ರದ ಉದ್ಘಾಟನೆ ಜನವರಿ 16 ರಂದು ನೆರವೇರಲಿದೆ.

ಗರಡಿಮನೆ: ಗ್ರಾಮೀಣ ಭಾಗದಲ್ಲಿ ಕುಸ್ತಿ ಪಂದ್ಯಾವಳಿಯನ್ನು ಉತ್ತೇಜಿಸುವ ಸಲುವಾಗಿ ಸುತ್ತೂರು ಗ್ರಾಮದಲ್ಲಿ ಸರ್ಕಾರದ ಸಹಯೋಗದಲ್ಲಿ ನೂತನ ಗರಡಿಮನೆಯನ್ನು ನಿರ್ಮಿಸಲಾಗಿದೆ. ಸುತ್ತಮುತ್ತಲಿನ ಗ್ರಾಮಗಳ ಕುಸ್ತಿಪಟುಗಳಿಗೆ ಇಲ್ಲಿ ಅಭ್ಯಾಸ ಮಾಡಿಕೊಳ್ಳಲು ಅನುಕೂಲವಾಗಲಿದ್ದು ಜನವರಿ 15 ರಂದು ಉದ್ಘಾಟನೆಯಾಗಲಿದೆ.

ಪ್ರಸಾದ ವ್ಯವಸ್ಥೆ: ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವ ಭಕ್ತಾದಿಗಳಿಗೆ ಪ್ರತಿನಿತ್ಯವೂ ಬೆಳಗ್ಗೆ, ಮಧ್ಯಾಹ್ನ ಹಾಗೂ ರಾತ್ರಿ ಪ್ರಸಾದದ ವ್ಯವಸ್ಥೆ ಇರುತ್ತದೆ.

ವಸತಿ ವ್ಯವಸ್ಥೆ: ಜಾತ್ರೆಗೆ ಬರುವ ಭಕ್ತಾದಿಗಳ ವಾಸ್ತವ್ಯಕ್ಕೆ ಇರುವ ಎಲ್ಲಾ ಶಾಶ್ವತ ವಸತಿ ವ್ಯವಸ್ಥೆಗಳ ಜೊತೆಗೆ ಸಾವಿರಾರು ಮಂದಿಗೆ ತಾತ್ಕಾಲಿಕ ವಸತಿ ವ್ಯವಸ್ಥೆಯನ್ನು ಕೂಡ ಕಲ್ಪಿಸಲಾಗಿದೆ.

ಸಾರಿಗೆ ಸಂಪರ್ಕ: ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವ ಭಕ್ತಾದಿಗಳು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಖಾಸಗಿಯವರಿಂದ ಸುತ್ತೂರು ಶ್ರೀಕ್ಷೇತ್ರಕ್ಕೆ ವಿಶೇಷ ಬಸ್ಸುಗಳ ವ್ಯವಸ್ಥೆಯನ್ನು ಕಲ್ಪಿಸಿರುತ್ತಾರೆ.

ಜಾತ್ರಾ ಮಹೋತ್ಸವದಲ್ಲಿ ನಾಡಿನ ಅನೇಕ ಮಠಾಧೀಶರುಗಳು, ಮಾರಿಷಸ್ ಗಣರಾಜ್ಯದ ಘನತೆವೆತ್ತ ಉಪರಾಷ್ಟ್ರಪತಿಗಳು, ಕರ್ನಾಟಕದ ಘನತೆವೆತ್ತ ರಾಜ್ಯಪಾಲರು, ಸನ್ಮಾನ್ಯ ಮುಖ್ಯಮಂತ್ರಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಚಿವರುಗಳು, ಸಂಸದರು, ಶಾಸಕರು, ಗಣ್ಯರು ಹಾಗೂ ಕಲಾವಿದರು ಪಾಲ್ಗೊಳ್ಳಲಿದ್ದಾರೆ.

ವೈವಿಧ್ಯತೆಯಿಂದ ಕೂಡಿರುವ ಈ ಜಾತ್ರಾ ಮಹೋತ್ಸವದ ಎಲ್ಲ ಕಾರ್ಯಕ್ರಮಗಳಲ್ಲಿಯೂ ಭಕ್ತಾದಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಗುರುಕೃಪೆಗೆ ಪಾತ್ರರಾಗಬೇಕಾಗಿ ಕೋರಿದೆ.

******